# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು -572103


ಸಂಖ್ಯೆ:ತುವಿ:ಶೈವಿ:2026-27/೨೦೦ ದಿನಾಂಕ:16.04.2026

## ಸುತ್ತೋಲೆ

ವಿಷಯ:- ಭಾರತ ಸಂವಿಧಾನ ಮತ್ತು ಸಂವಿಧಾನಿಕ ಮೌಲ್ಯಗಳ ಪತ್ರಿಕೆಯ ಬೋಧನೆಯ ಕುರಿತು.

ಉಲ್ಲೇಖ:- 1) ತುಮಕೂರು ವಿಶ್ವವಿದ್ಯಾನಿಲಯ ರಾಜ್ಯಶಾಸ್ತ್ರ ಅಧ್ಯಾಪಕರ ಅಕಾಡಮಿ (ರಿ), ಇವರ ಮನವಿ ಪತ್ರಗಳ ದಿನಾಂಕ:10.03.2026 & 02.04.202025

2) ವಿವಿ ಸುತ್ತೋಲೆ ಸಂಖ್ಯೆ:ತುವಿ:ಶೈವಿ:UG:2024-25/8416 ದಿನಾಂಕ:15.10.2024

3) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:14.04.2026.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಕಾಲೇಜುಗಳು ಕರ್ನಾಟಕ ಸರ್ಕಾರ ಆದೇಶ ಮತ್ತು ರಾಜ್ಯಶಾಸ್ತ್ರ ಅಧ್ಯಯನ ಮಂಡಳಿ ನಿರ್ಣಯದ ಅನ್ವಯದಂತೆ ಎಲ್ಲಾ ಸ್ನಾತಕ ಪದವಿಗಳ **"ಸಂವಿಧಾನಿಕ ಮೌಲ್ಯಗಳ ಪತ್ರಿಕೆ"**ಯನ್ನು ಸ್ನಾತಕೋತ್ತರ ರಾಜ್ಯಶಾಸ್ತ್ರ ಮತ್ತು ಸ್ನಾತಕೋತ್ತರ ಕಾನೂನು ಪದವಿ ವಿದ್ಯಾರ್ಹತೆ ಹೊಂದಿರುವ ಬೋಧಕ ಸಿಬ್ಬಂದಿಗಳಿಂದ ಮಾತ್ರ ಕಡ್ಡಾಯವಾಗಿ ಬೋಧಿಸುವಂತೆ ಕ್ರಮವಹಿಸುವುದು, ತಪ್ಪಿದ್ದಲ್ಲಿ ವಿಶ್ವವಿದ್ಯಾನಿಲಯದ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದೆಂದು ಉಲ್ಲೇಖ (02)ರ ವಿಶ್ವವಿದ್ಯಾನಿಲಯದ ಸುತ್ತೋಲೆಯಲ್ಲಿ ಈಗಾಗಲೇ ತಿಳಿಸಲಾಗಿತ್ತು.

ಆದರೆ ಕೆಲವು ಕಾಲೇಜುಗಳಲ್ಲಿ ಬೇರೆ ವಿಷಯಗಳ ಅಧ್ಯಾಪಕರಿಂದ ಸದರಿ ಪತ್ರಿಕೆಯನ್ನು ಬೋದಿಸುತ್ತಿರುವುದಾಗಿ ಉಲ್ಲೆಖ (01)ರ ಪತ್ರಗಳಲ್ಲಿ ತಿಳಿಸಲಾಗಿರುತ್ತದೆ. ಆದ್ದರಿಂದ ವಿಶ್ವವಿದ್ಯಾನಿಲಯದ ಉಲ್ಲೇಖ(02)ರ ಸುತ್ತೋಲೆಯಂತೆ **"ಸಂವಿಧಾನಿಕ ಮೌಲ್ಯಗಳ ಪತ್ರಿಕೆ"**ಯನ್ನು ಸ್ನಾತಕೋತ್ತರ ರಾಜ್ಯಶಾಸ್ತ್ರ ಮತ್ತು ಸ್ನಾತಕೋತ್ತರ ಕಾನೂನು ಪದವಿ ವಿದ್ಯಾರ್ಹತೆ ಹೊಂದಿರುವ ಬೋಧಕ ಸಿಬ್ಬಂದಿಗಳಿಂದ ಮಾತ್ರ ಕಡ್ಡಾಯವಾಗಿ ಬೋಧಿಸುವಂತೆ ಅಗತ್ಯ ಕ್ರಮವಹಿಸುವುದು ಎಂದು ಮತ್ತೊಮ್ಮೆ ತಿಳಿಸಲು ಮಾನ್ಯ ಕುಲಪತಿಗಳಿಂದ ನಿರ್ದೇಶಿತನಾಗಿದ್ದೇನೆ.

ಆದೇಶದ ಮೇರೆಗೆ,

ಉಪಕುಲಸಚಿವರು

ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

ಎಲ್ಲಾ ಪ್ರಾಂಶುಪಾಲರುಗಳು, ಘಟಕ ಹಾಗೂ ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಪ್ರತಿಗಳು:

1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ತುಮಕೂರು ವಿಶ್ವವಿದ್ಯಾನಿಲಯ ರಾಜ್ಯಶಾಸ್ತ್ರ ಅಧ್ಯಾಪಕರ ಅಕಾಡಮಿ (ರಿ),
4. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ಜಾಲತಾಣದಲ್ಲಿ ಪ್ರಕಟಿಸುವುದು ಮತ್ತು ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಗೆ ಇ-ಮೇಲ್ ಕಳುಹಿಸುವುದು.
5. ಕಛೇರಿ ಪ್ರತಿ.